

# ಕೆಂಪು ಮಡಿವಾಳ

■ ಬಿ.ಆರ್. ಸತ್ಯನಾರಾಯಣ
ಕಲೆ: ಸಂತೋಷ್ ಸಸಿಹಿತ್ಲು

ಉತ್ತರ ಅಮೆರಿಕದಲ್ಲಿ, ಒಂದು ವರ್ಷ ಚಳಿಗಾಲ ಭಯಂಕರವಾಗಿತ್ತು. ತಾವೋಸ್ ಹಳ್ಳಿಯ ಮೇಲೆ ವಿಪರೀತ ಹಿಮ ಬೀಳಲಾರಂಭಿಸಿತ್ತು. ಅಲ್ಲಿನ ರೆಡ್ ಇಂಡಿಯನ್ನರಿಗೆ ಬೆಂಕಿಯನ್ನು ಹೊತ್ತಿಸಲು ಚಕಮಕಿ ಕಲ್ಲು ಸಿಗಲಿಲ್ಲ. ಮನೆಯೊಳಗೆ ಸಿಕ್ಕಿಬಿದ್ದಿದ್ದ ಅವರೆಲ್ಲರಿಗೂ 'ನಾವಿನ್ನು ಸತ್ತಂತೆಯೇ ಸರಿ' ಎನ್ನಿಸತೊಡಗಿತ್ತು.

ಒಂದು ದಿನ ಬೆಳಿಗ್ಗೆ, ಒಂದು ಕಂದುಬಣ್ಣದ ಪುಟಾಣಿ ಮಡಿವಾಳದ ಹಕ್ಕಿ ಎಲ್ಲಿಂದಲೋ ಹಾರಿಕೊಂಡು ತಾವೋಸ್ ಹಳ್ಳಿಗೆ ಬಂದು, ಚಳಿ ತಡೆಯದೆ, ಊರಮುಂದಿನ ಕಟ್ಟೆಯ ಮೇಲೆ ಬಿದ್ದಿತು. ಆಗ ಅಲ್ಲಿಗೆ ಬಂದ ಬಿಳಿಯ ಕರಡಿ 'ವಾವ್, ಇನ್ನೇನು ಈ ಹಳ್ಳಿಯ ಜನರೆಲ್ಲಾ ಸಾಯುತ್ತಾರೆ. ಆಗ ಇಡೀ ಹಳ್ಳಿಗೆ ನಾನೇ ಯಜಮಾನ' ಎಂದು ಹಾಡತೊಡಗಿತು.

ಕರಡಿಯ ಹಾಡು ಕೇಳಿಸಿಕೊಂಡ ಮಡಿವಾಳ, 'ಇಲ್ಲ, ನನ್ನ ಪ್ರಾಣ ಕೊಟ್ಟಾದರೂ ಅವರನ್ನು ನಾನು ಉಳಿಸಿಕೊಳ್ಳುತ್ತೇನೆ' ಎಂದು ಹಾಡಿತು.

ಮಡಿವಾಳ ದಕ್ಷಿಣದ ಕಡೆಗೆ ಹಾರಿತು. ಹಾರಿ, ಹಾರಿ ದೂರದಲ್ಲಿ ಬಿಳಿಯರಿದ್ದ ಕ್ಯಾಂಪಿನ ನಡುವೆ ಬೆಂಕಿ ಉರಿಯುತ್ತಿರುವುದನ್ನು ನೋಡಿತು. ಬೆಂಕಿಯನ್ನು ಸಮೀಪಿಸಿದ ಮಡಿವಾಳ, ಉರಿಯುತ್ತಿದ್ದ ಕಡ್ಡಿಯೊಂದನ್ನು ಉಗುರಿನಲ್ಲಿ ಹಿಡಿದು, ಮರಳಿ ತಾವೋಸ್ ಹಳ್ಳಿಗೆ ಬಂದು, ಬೆಂಕಿಯಿದ್ದ ಕಡ್ಡಿಯನ್ನು ನೆಲಕ್ಕೆ ಚುಚ್ಚಿ ನಿಲ್ಲಿಸಿತು. ಒಂದಷ್ಟು ತರಗೆಲೆ–ಕಡ್ಡಿಗಳನು ಸಂಗ್ರಹಿಸಿ ತಂದು ಬೆಂಕಿಗೆ ಹಾಕಿ, ತನ್ನ ರೆಕ್ಕೆಗಳನ್ನೆ ಬೀಸಿ ಗಾಳಿ ಹಾಕಲಾರಂಬಿಸಿತು. ಬೆಂಕಿ ಹತ್ತಿಕೊಳ್ಳಲಾರಂಭಿಸಿದಾಗ, ಮತ್ತಷ್ಟು ಸೌದೆ ತರಲು ಹೋಯಿತು. ಆಗ ಅಲ್ಲಿಗೆ ಬಂದ ಕರಡಿ, ತನ್ನ ಬಾಯಿಯಿಂದ ಜೋರಾಗಿ ಗಾಳಿಯೂದಿ, ಬೆಂಕಿಯನ್ನು ಆರಿಸಿ 'ವಾವ್, ಇನ್ನೇನು ಈ ಹಳ್ಳಿಯ ಜನರೆಲ್ಲಾ ಸಾಯುತ್ತಾರೆ. ಆಗ ಇಡೀ ಹಳ್ಳಿಗೆ ನಾನೇ ಯಜಮಾನ' ಎಂದು ಹಾಡುತ್ತಾ ಹೋಯಿತು.

ಮರಳಿ ಬಂದ ಮಡಿವಾಳಕ್ಕೆ ನಂದಿ ಹೋಗಿದ್ದ ಬೆಂಕಿಯನ್ನು ಕಂಡು ದುಃಖವಾಯಿತು. ಕೆದಕಿ ನೋಡಿದಾಗ, ಇನ್ನೂ ಒಂದಿಷ್ಟು ಬೆಂಕಿ ಇತ್ತು. ತಕ್ಷಣ ತಾನು ತಂದಿದ್ದ ಸೌದೆ–ಪುರಲೆ ಎಲ್ಲ ಹಾಕಿ, ರೆಕ್ಕೆಯಿಂದ ಜೋರಾಗಿ ಗಾಳಿ ಬೀಸುತ್ತಾ, 'ಉರಿ, ಉರಿ ಜೋರಾಗಿ ಉರಿ ಬೆಂಕಿಯೇ! ತಾವೋಸ್ ಹಳ್ಳಿಯ ಜನರಿಗಾಗಿ ಉರಿ!' ಎಂದು ಹಾಡತೊಡಗಿತು. ರೆಕ್ಕೆಯಿಂದ ಗಾಳಿ ಬೀಸುವುದು ಜೋರಾದ ಹಾಗೆ, ಮಡಿವಾಳ ಹಾಡುವುದೂ ಜೋರಾಯಿತು. ಹಾಡುವ, ಗಾಳಿ ಬೀಸುವ ಭರದಲ್ಲಿ ಅದರ ಎದೆಯ ಭಾಗಕ್ಕೆ ಬೆಂಕಿ ತಗುಲಿ, ಸುಟ್ಟು ಅದು ಮೂರ್ಛೆ ಹೋಯಿತು!

ಮಡಿವಾಳದ ಹಾಡು ಕೇಳಿ, ಹೊರಬಂದ ಜನ ಬೆಂಕಿಯನ್ನು ಕಂಡು ಖುಷಿಯಾದರು. ಇನ್ನಷ್ಟು ಮತ್ತಷ್ಟು ಸೌದೆಗಳನ್ನು ತಂದು ಬೆಂಕಿಯನ್ನು ಜೋರಾಗಿ ಉರಿಸುವುದರಲ್ಲಿ ನಿರತರಾದ ಅವರಿಗೆ, ಎದೆಯುರಿಗೆ ಮೂರ್ಛೆ ಹೋಗಿದ್ದ ಪುಟ್ಟ ಮಡಿವಾಳ ಕಾಣಲೇ ಇಲ್ಲ! ಸ್ವಲ್ಪ ಹೊತ್ತಿನ ನಂತರ ಮುದುಕನೊಬ್ಬ ಮಡಿವಾಳವನ್ನು ಗಮನಿಸಿ, ಎತ್ತಿಕೊಂಡು ಅದಕ್ಕೆ ಉಪಚಾರ ಮಾಡಿದ. 'ಏಳು ಎಚ್ಚರಗೊಳ್ಳಲೆ ಮಡಿವಾಳ, ನಮಗಾಗಿ ಬೆಂಕಿಯ ತಂದ ಮಡಿವಾಳ, ಕೆಂಪು ಎದೆಯ ಸುಂದರ ಮಡಿವಾಳ' ಎಂದು ಹಾಡತೊಡಗಿದ.

ಮಡಿವಾಳಕ್ಕೆ ಎಚ್ಚರವಾದಾಗ, ಹಳ್ಳಿಯ ಜನರೆಲ್ಲ ಹಾಡು ಕುಣಿತದಲ್ಲಿ ಮುಳುಗಿಹೋಗಿದ್ದರು. ಅವರೆಲ್ಲಾ ತನ್ನನ್ನೇ ಕುರಿತು ಹಾಡುತ್ತಿರುವುದನ್ನು ಕಂಡು, ಕೇಳಿ ತನ್ನ ಎದೆಯನ್ನು ನೋಡಿಕೊಂಡಿತು. ಬೆಂಕಿ ತಗುಲಿದ್ದ ಭಾಗ ಕೆಂಪಾಗಿತ್ತು. ತಾವೋಸ್ ಜನರಿಂದ ಬೀಳ್ಕೊಂಡ ಮಡಿವಾಳ ಮರಳಿ ತನ್ನ ಗುಂಪು ಸೇರಿಕೊಂಡಿತು. ಮುಂದುವರೆದ ಅದರ ಸಂತಾನದ ಮಡಿವಾಳಗಳಿಗೆಲ್ಲಾ ಎದೆಯ ಭಾಗ ಕೆಂಪಾಗಿಯೇ ಇದ್ದುದರಿಂದ, ಅದರ ಸಂತತಿ ಕೆಂಪು ಮಡಿವಾಳವೆಂದೇ ಗುರುತಿಸಲ್ಪಟ್ಟವು!

(ರೆಡ್ ಇಂಡಿಯನ್ನರ ಜನಪದ ಕಥೆ)